ಎಲ್ಲ ಸರಿಯಾಗಿದ್ದಾಗ ಮೋಹಕವಾಗಿ ಮಾತಾಡುತ್ತಾ, ಅದೇ ಆಗ ಅರಳಿದ ಹೂವಿನಂತೆ ಫ್ರೆಶ್ ಆಗಿ ಕಾಣುತ್ತಿದ್ದ ಮಲ್ಲಿಕಾಳಲ್ಲಿ ಈ ಥರದ ಸಿಡಿಮಿಡಿ ಎಲ್ಲಿಂದ ಹುಟ್ಟುತ್ತದೆ ಎಂದು ರಮೇಶ್ ರೆಡ್ಡಿಗೆ ದಿಗ್ಭ್ರಮೆಯಾಗುತ್ತಿತ್ತು. ಅಂಥ ಸಿಡಿಮಿಡಿಯ ಗಳಿಗೆಗಳಲ್ಲಿ ಮಲ್ಲಿಕಾ ಯಾರೆಂದರೆ ಅವರ ಹೆಸರು ತೆಗೆದು ದೂರಲು ಶುರು ಮಾಡುತ್ತಿದ್ದಳು. ಮೊದಮೊದಲು ಮಲ್ಲಿಕಾಳ ಇಂಥ ದೂರುಗಳಿಗೆ ಕಿವಿಗೊಟ್ಟ ರಮೇಶ್ ಕಡೆಯ ಪಕ್ಷ ಒಂದು ಡಝನ್ ಗೆಳೆಯ, ಗೆಳತಿಯರ ಸ್ನೇಹ ಕಳೆದುಕೊಂಡಿದ್ದ. ಆ ನಂತರ ಸೂಕ್ಷ್ಮವಾಗಿ ವಿಚಾರಿಸಿ ನೋಡಿದರೆ, ಅವರಲ್ಲಿ ಬಹುತೇಕರು ತನ್ನ ಬಗ್ಗೆಯಾಗಲೀ ಮಲ್ಲಿಕಾ ಬಗ್ಗೆಯಾಗಲೀ ಒಂದು ಸಣ್ಣ ಬೈಗುಳವನ್ನೂ ಬಳಸಿರಲಿಲ್ಲ ಎನ್ನುವುದು ಗೊತ್ತಾಗಿತ್ತು; ಮಲ್ಲಿಕಾ ಹೇಳಿದ್ದಕ್ಕೆಲ್ಲ ಕಿವಿಗೊಟ್ಟು, ಅದನ್ನೆಲ್ಲ ಹಿಂದೆಮುಂದೆ ನೋಡದೆ ನಂಬಿದ ತನ್ನ ಠೊಳ್ಳು ಮನಸ್ಸಿನ ಬಗೆಗೇ ರಮೇಶನಿಗೆ ಅಸಹ್ಯವಾಗಿತ್ತು. ಅವನು ಮುಂಬಯಿಯಲ್ಲಿ ಒಂದು ತಿಂಗಳು ಒಬ್ಬನೇ ಇದ್ದ ಕಾಲದಲ್ಲಿ ಇದೆಲ್ಲದರ ಬಗ್ಗೆ ಯೋಚಿಸುತ್ತಿರುವಾಗ... ಮಲ್ಲಿಕಾಳ ಸಮಸ್ಯೆಗಳು ಮಾತ್ರವಲ್ಲದೆ, ತನ್ನ ದೋಷಗಳು, ದುರಹಂಕಾರ, ದೌರ್ಬಲ್ಯಗಳು ಕೂಡ ಸ್ಪಷ್ಟವಾಗಿ ಗೋಚರಿಸತೊಡಗಿದ್ದವು.

ಅಷ್ಟಿಷ್ಟು ಮರಾಠಿ ಭಾಷೆ ಗೊತ್ತಿದೆಯೆಂಬ ಒಂದೇ ಕಾರಣಕ್ಕೆ ಆ ಮುಂಬಯಿಯ ರಿಪೋರ್ಟಿಂಗ್ ಅಸೈನ್‌ಮೆಂಟ್ ಪಡೆದಿದ್ದ ರಮೇಶ್ ರೆಡ್ಡಿ, ರಾತ್ರಿ ಒಬ್ಬನೇ ಹೋಟೆಲ್ ರೂಮಿನಲ್ಲಿ ಕೂತಿರುವಾಗ, ಈಚೆಗೆ ತನ್ನ ವೃತ್ತಿಯಲ್ಲಿ ಆಗುತ್ತಿರುವ ಅಸಂಬದ್ಧ ಏರಿಳಿತಗಳನ್ನು ನೆನೆದು ಖಿನ್ನನಾಗುತ್ತಿದ್ದ. ತನ್ನ ಎಂಜಿನಿಯರಿಂಗ್ ಕಲಿಕೆಯಲ್ಲಿ ರೂಢಿಯಾಗಿದ್ದ ನಿಖರವಾದ ಭಾಷೆಗೂ, ರಿಪೋರ್ಟಿಂಗಿನ ಬಿಡುಬೀಸು ಭಾಷೆಗೂ ಆಕಾಶ–ಭೂಮಿಗಳಷ್ಟು ಅಂತರವಿರುವುದು ಅವನಿಗೆ ಮೊದಲಿನಿಂದಲೂ ಗೊತ್ತಿತ್ತು; ಆದರೆ ಈ ಬಿಡುಬೀಸು ಭಾಷೆ ತನ್ನೊಳಗೆ ಉಂಟು ಮಾಡಿರುವ ಪರಿಣಾಮದ ಸರಿಯಾದ ಅಂದಾಜು ಮಾತ್ರ ಈ ವಿರಾಮದಲ್ಲಿ ಅವನಿಗೆ ಸಿಕ್ಕತೊಡಗಿತು. ಅದರ ಜೊತೆಗೆ, ಇವತ್ತಿನ ಪೊಲಿಟಿಕಲ್ ಸ್ಟೋರಿ ಹೀಗಿರಬೇಕು, ಹಾಗಿರಬೇಕು... ಎಂದು ಇತ್ತಿತ್ತಲಾಗಿ ಹಲವು ದಿಕ್ಕಿನಿಂದ ಒತ್ತಡಗಳು ಕೂಡ ಹೆಚ್ಚತೊಡಗಿದ್ದವು... ಮುಂಬಯಿಯಲ್ಲಿದ್ದಾಗಲೇ ಇದಕ್ಕೆಲ್ಲ ಕೊನೆ ಹಾಡಬೇಕೆಂದುಕೊಳ್ಳುತ್ತಿದ್ದ ರಮೇಶನಿಗೆ, ಅಲ್ಲಿಂದ ವಾಪಸ್ ಬಂದ ಮೇಲಂತೂ ಯಾಕೋ ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಇದ್ದುಬಿಡಬೇಕೆನ್ನಿಸಿತು. ತನಗೆ ಏನೇನೂ ಗೊತ್ತಿರದ ವಿಷಯಗಳ ಬಗ್ಗೆ ದಿನನಿತ್ಯ ಏನೇನೋ ಮಾತಾಡುವುದು ಈಚೆಗಂತೂ ತೀರಾ ತೀರಾ ಕಷ್ಟ ಎನ್ನಿಸುತ್ತಿದೆ ಎಂದು ಡಾ. ರಾಮಾನಾಯಕರ ಜೊತೆ ಗುಂಡು ಹಾಕುವಾಗ ಮತ್ತೆ ಮತ್ತೆ ಹೇಳಿಕೊಂಡಿದ್ದ.

ಒಂದು ಮಧ್ಯಾಹ್ನ ಅದೇನೆನ್ನಿಸಿತೋ ಏನೋ, ಥಟ್ಟನೆ ಚಾನಲ್ ಕೆಲಸವನ್ನೇ ಬಿಡಬೇಕೆಂದು ತೀರ್ಮಾನಿಸಿದ ರಮೇಶ್ ರೆಡ್ಡಿ ಯಾರಿಗೂ ಹೇಳದೆ ಆಫೀಸು ಬಿಟ್ಟು ಮನೆಗೆ ಬಂದು ಮೇಲ್ ಮೂಲಕ ರಾಜೀನಾಮೆ ಕಳಿಸಿಬಿಟ್ಟಿದ್ದ. ಒಂದೆರಡು ತಿಂಗಳು ಆರಾಮಾಗಿದ್ದು, ತನ್ನ ಎಂಜಿನಿಯರಿಂಗ್ ವೃತ್ತಿಗೆ ಮರಳಬೇಕು; ಅಥವಾ ಹಿಂದೊಮ್ಮೆ ಮಲ್ಲಿಕಾ ಜೊತೆಯೂ, ಡಾ. ರಾಮಾನಾಯಕರ ಜೊತೆಯೂ ಮಾತಾಡಿಕೊಂಡಿದ್ದಂತೆ, ಸಂಗೀತ, ಚಿತ್ರಕಲೆ, ವಿಜ್ಞಾನ, ಚರಿತ್ರೆ, ಸಮಾಜ, ಕನ್ನಡ, ಇಂಗ್ಲಿಷ್, ಗಣಿತ, ಕರಕುಶಲ ಕಲೆ... ಹೀಗೆ ಎಲ್ಲವನ್ನೂ ಮಕ್ಕಳಿಗೆ ಹೇಳಿಕೊಡುವ 'ಲೈಫ್ ಸ್ಟೈಲ್' ಶಾಲೆ ಶುರು ಮಾಡಬೇಕು ಎಂಬ ಆಸೆ ಈ ಬಿಡುವಿನಲ್ಲಿ ಮತ್ತೆ ಸುಳಿಯತೊಡಗಿತು...

ಮುಂಬಯಿಯಲ್ಲಿ ಒಬ್ಬನೇ ಕೂತಿದ್ದಾಗ, 'ಇನ್ನು ನಮ್ಮ ಈಗಿನ ಬಿಂದಾಸ್ ಸ್ಟೈಲ್ ಬಿಟ್ಟು ತೆಪ್ಪಗೆ ಮದುವೆಯಾಗೋಣ' ಎಂದು ಮಲ್ಲಿಕಾಗೆ ಹೇಳಿ ಅವಳನ್ನು ಒಪ್ಪಿಸಬೇಕೆಂದುಕೊಂಡಿದ್ದ ರಮೇಶ್, ಮುಂಬಯಿಯಿಂದ ವಾಪಸ್ ಬಂದ ದಿನದಿಂದಲೂ ಅದನ್ನು ಹೇಳಲು ತಕ್ಕ ವಾಕ್ಯಗಳನ್ನೂ ತಯಾರು ಮಾಡಿಟ್ಟುಕೊಂಡಿದ್ದ! ಆದರೆ, ಅವತ್ತು ಆ ಮಾತಿಗೆ ತಕ್ಕ ರೊಮ್ಯಾಂಟಿಕ್‌ಗಳಿಗೆ ಬರುವ ಮೊದಲೇ ಮಲ್ಲಿಕಾ ಎದ್ದು ಹೋಗಿದ್ದರಿಂದ ಆ ವಾಕ್ಯ ಅವನ ಗಂಟಲಲ್ಲೇ ಉಳಿಯಿತು. ನಾಳೆನಾಡಿದ್ದರಲ್ಲಿ